



(6ನೇ ಪುಟದಿಂದ)

ಉತ್ತರ ಅಮೆರಿಕದಲ್ಲಿ ಶರದೃತು ಮತ್ತು ಶಿಶಿರ ಎರಡೂ ಋತುಗಳಲ್ಲಿ ಕಾಣುವ ದೃಶ್ಯವೈಭವ ಅತ್ಯಂತ ವಿಭಿನ್ನವಾದದ್ದು. ಪ್ರಕೃತಿ ತನ್ನ ಎರಡು ಅವತಾರಗಳನ್ನು ತೋರಿ ಮನಸ್ಸನ್ನು ಮಂತ್ರಮುಗ್ಧಗೊಳಿಸುತ್ತಾಳೆ.

ಆಗಸ್ಟ್ ತಿಂಗಳ ವರೆಗೆ ಹಚ್ಚ ಹಸಿರು ಉಡುಪು ಧರಿಸಿದ್ದ ಮರಗಳೆಲ್ಲ, ಸೆಪ್ಟಂಬರ್ ತಿಂಗಳು ಪ್ರಾರಂಭವಾಗುತ್ತಿದ್ದಂತೆಯೇ ಕಣ್ಮನ ಸೆಳೆಯುವಂತಹ ರಂಗುರಂಗಿನ ಎಲೆಗಳ ಆಭರಣಗಳನ್ನು ತೊಟ್ಟು ವಿಜೃಂಭಿಸಿದವು. ಮನೆಗಳ ಸುತ್ತಮುತ್ತಲಾಗಲೀ, ಶಾಪಿಂಗ್ ಮಾಲ್‌ಗಳ ಬಳಿಯಲ್ಲಾಗಲೀ, ರಸ್ತೆ ಬದಿಯಲ್ಲಾಗಲೀ, ಊರಾಚೆಯಾಗಲೀ ಎತ್ತ ಕಣ್ಣು ಹಾಯಿಸಿದರೂ ಆಗ ಕಂಡುಬಂದದ್ದು ನಯನ ಮನೋಹರ ದೃಶ್ಯ! ನಿಜಕ್ಕೂ ಇವೆಲ್ಲ ಬಣ್ಣದೆಲೆಗಳೋ ಅಥವಾ ಹೂವುಗಳೋ?! ಪ್ರಕೃತಿಯ ಕುಂಚದ ಕಲೆಯೋ, ಇಲ್ಲ, ಪ್ರಕೃತಿಯಾಡಿರುವ ಓಕುಳಿಯಾಟವೋ?! ಏನೇ ಇರಲಿ, ಇವುಗಳ ಸೌಂದರ್ಯ ಸವಿಯಲು ಎರಡು ಕಣ್ಣು ಸಾಲದು.

ಈಗ ಶರದೃತು ಕಳೆದು ಶಿಶಿರದ ಚಳಿ ಪ್ರಾರಂಭವಾಗುತ್ತಿದ್ದಂತೆಯೇ ಮರಗಳು ತಮ್ಮ ಎಲೆಗಳ ರಂಗಿನಾಭರಣಗಳನ್ನು ಕಳಚಿಡುತ್ತಿವೆ. ಹಾಗೆಂದು ಅವುಗಳ ಸೌಂದರ್ಯ ಕುಂದಿಲ್ಲ! ನಿರಾಭರಣ ಸುಂದರಿಯಾಗಿಯೇ ಕಳೆ ತಳೆದು ಮುಗಿಲತ್ತ ಮೈ ಚಾಚಿ ರಾರಾಜಿಸುತ್ತ ನಿಂತಿವೆ. ಇದು ಪ್ರಕೃತಿ ಪೆನ್ಸಿಲಿನಿಂದ ರಚಿಸಿದ ರೇಖಾಚಿತ್ರ ಇರಬಹುದೇ? ಮರದಡಿಗಳಲ್ಲಿ ನೋಡಿದರೆ, ಪ್ರಕೃತಿ ಹಸಿರು ಹುಲ್ಲು ಹಾಸಿನ ಮೇಲೆ ಹಣ್ಣೆಲೆಗಳ ಮಳೆಗರೆದು ರಂಗಿನ ರಂಗೋಲಿಗಳನ್ನು ರಚಿಸಿರುತ್ತಾಳೆ! ನಿಜಕ್ಕೂ ಭವ್ಯ ದೃಶ್ಯ!

ಹೀಗೆ ಎಲೆಗಳು ಉದುರಿ ಬೀಳುವ ಈ ಅವಧಿಯೇ 'ಫಾಲ್ ಸೀಸನ್'. ಜನವರಿ– ಫೆಬ್ರವರಿಯ ವೇಳೆಗೆ ಎಲ್ಲ ಮರಗಳೂ ತಮ್ಮ ಎಲ್ಲ ಎಲೆಗಳನ್ನು ಕಳಚಿಕೊಂಡು ನಿಂತು, ಮತ್ತೆ ಚಿಗುರುವಾಸೆಯಿಂದ ವಸಂತಕ್ಕಾಗಿ ಕಾಯುತ್ತವೆ.

ಪ್ರಕೃತಿಯ ಈ ವಿಸ್ಮಯಕರ ಲೀಲೆಗೆ ಸಾಟಿಯುಂಟೇ?